೧. ಪ್ರಶ್ನೋತ್ತರ

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಉಡುಪಿ ಮತ್ತು ಮಂಗಳೂರಿನಲ್ಲಿರುವ ರೋಗಗ್ರಸ್ಥ ಉದ್ದಿಮೆಗಳು.

213 (2569)

ಶ್ರೀ ಗೋಪಾಲ ಬಂಡಾರಿ ಹೆಚ್.(ಕಾರ್ಕಳ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಲ್ಲಿ ಎಷ್ಟು ರೋಗಗ್ರಸ್ತ ಘಟಕಗಳಿವೆ?

ಆ) ಅವುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಉಡುಪಿ - 9

ಮಂಗಳೂರು - 3

ಆ) (ಬೋರ್ಡ್ ಫಾರ್ ಇಂಡಸ್ಟ್ರಿಯಲ್ ಅಂಡ್ ಫೈನಾನ್ಸಿಯಲ್ ರಿಕನ್ಸ್ಟ್ರಕ್ಷನ್) ರಾಜ್ಯದಲ್ಲಿ ಬಿ.ಐ.ಎಫ್.ಆರ್. ಘಟಕಗಳನ್ನು ಹೊರತುಪಡಿಸಿ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

1) ಬಡ್ಡಿರಹಿತ ಬೀಜಧನ ಸಾಲ - ರೂ.2.50 ಲಕ್ಷ ಯೋಜನಾ ವೆಚ್ಚದ ಶೇ.25ರಷ್ಟು.

2) ಕೆ.ಪಿ.ಟಿ.ಸಿ.ಎಲ್.ನಿಂದ ಘಟಕ ಮುಚ್ಚಿದ ಅವಧಿಯಲ್ಲಿ ಯಾವುದೇ ನಿಗದಿತ ದರ ಪಾಗೂ ಬೇಡಿಕೆ ದರ (ಡಿಮಾಂಡ್ ಚಾರ್ಜಸ್) ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

3) ವಿದ್ಯುತ್ ಬಿಲ್ಲಿನ ಬಾಕಿ ಪಾವತಿಯನ್ನು ಶೇ.ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

4) ಮಾರಾಟ ತೆರಿಗೆಯ ಬಾಕಿ ಪಾವತಿಸುವಲ್ಲಿ ಶೇ.ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿಸಲು

ಅವಕಾಶ.

5) ಕೆ.ಪಿ.ಟಿ.ಸಿ.ಎಲ್. ಮತ್ತು ವಾಣಿಜ್ಯ ಇಲಾಖೆಗಳು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ಲೆಕ್ಕ ಹಾಕದಿರುವುದು.

6) ಮುಂದಿನ ಅವಧಿಗೆ ಪಾವತಿ ಮಾಡಬೇಕಾದ ತೆರಿಗೆಗಳನ್ನು ಬಡ್ಡಿ ಇಲ್ಲದೇ ಪಾವತಿಸಲು ಮೂರು ವರ್ಷಗಳವರೆಗೆ ಅವಕಾಶ.

ಶ್ರೀ ಹೆಚ್.ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಾನು ಕೇಳಿರುವ ಪ್ರಶ್ನೆಗೆ ಉಡುಪಿಯಲ್ಲಿ -(9), ಮಂಗಳೂರಿನಲ್ಲಿ -(3) ರೋಗಗ್ರಸ್ಥ ಸಣ್ಣ ಕೈಗಾರಿಕೆಗಳಿವೆಯೆಂದು ಉತ್ತರವನ್ನು ಕೊಟ್ಟಿದ್ದಾರೆ ನನ್ನ ಅಭಿಪ್ರಾಯ ಹಾಗೂ ತಿಳುವಳಿಕೆಯ ಪ್ರಕಾರ ಇನ್ನು ಹೆಚ್ಚು ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಇವೆ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಸುಮಾರು 30ರಷ್ಟು ಗೇರು ಬೀಜ ಸಂಸ್ಕರಣ ಘಟಕಗಳು ಇವೆ. ಒಂದು ತಾಲ್ಲೂಕಿನಲ್ಲಿ ಇಷ್ಟು ಸಂಸ್ಕರಣ ಘಟಕಗಳಿದ್ದು ಇದರಲ್ಲಿ ಸುಮಾರು 25 ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ 15 ಘಟಕಗಳು ಮುಚ್ಚಿಕೊಂಡಿರುತ್ತವೆ, ಇವತ್ತು ಕೆಎಸ್ಎಫ್ಸಿಯಿಂದ ಹಾಗೂ ಇತರ ಬ್ಯಾಂಕಿನಿಂದ ತೆಗೆದುಕೊಂಡಿರುವ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಆಗದ ಎಲ್ಲಾ ಘಟಕಗಳು ಮುಚ್ಚುವ ಪರಿಸ್ಥಿತಿ ಇದೆ. ಆಗ್ರೋ ಬೇಸಿಸ್ ಇಂಡಸ್ಟ್ರೀಸ್ ಇವೆಲ್ಲಾ ಸಂಕಷ್ಟದಲ್ಲಿರುವಾಗ, ಸಂಸ್ಕರಣವಾದ ಗೇರು ಬೀಜ ಎಲ್ಲಾ ಪ್ರದೇಶಗಳಿಗೆ ಆಮದಾಗುತ್ತಿರುವುದರಿಂದ ಇಂತಹ ಘಟಕಗಳು ಇವತ್ತು ಬಹಳ ಕಷ್ಟದಲ್ಲಿರುತ್ತವೆ. ಪುನಃಶ್ಚೇತನ ಮಾಡಲು ಹಾಕಿಕೊಂಡಿರುವ ಕಾರ್ಯಕ್ರಮಗಳಲ್ಲಿ ವಿದ್ಯುತ್ ಬಿಲ್ಲನ್ನು 6 ಅರ್ಧವಾರ್ಷಿಕ ಕಂತುಗಳಲ್ಲಿ ಕೊಡಲಿಕ್ಕೆ ಇವತ್ತು ಸೂಚನೆಯನ್ನು ಮಾಡಿರುತ್ತಾರೆ. ಕೆಎಸ್ಎಫ್ಸಿ ಹಾಗೂ ಇತರ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡಿದ್ದು ಇದೆ. ಈ ಬಿಲ್ನ್ನು ಕಟ್ಟಲಿಕ್ಕೆ ಆಗದ ಕಾರ್ಮಿಕರ ಜೊತೆಗೆ ಕೈಗಾರಿಕೆಯ ಮಾಲೀಕರೂ ಕೂಡ ಕಷ್ಟದಲ್ಲಿದ್ದಾರೆ. ಈ ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ಹಾಗೂ ಆ ಕಾರ್ಖಾನೆಯನ್ನು ಪುನಃಶ್ಚೇತನ ಮಾಡುವ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಆರ್.ಕಾಶಪ್ಪನವರ್: ಟ್ರಾಸ್ಕ್ಫೋರ್ಸ್ ವರದಿಯ ಪ್ರಕಾರ ಈಗಾಗಲೇ ಉತ್ತರಿಸಿರುವಂತೆ ಉಡುಪಿಯಲ್ಲಿ 9, ಮಂಗಳೂರಿನಲ್ಲಿ 3 ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಇವೆ. ಜಿಲ್ಲಾ ಟಾಸ್ಕ್ಫೋರ್ಸ್ ಸಮಿತಿಯ ಮುಖಾಂತರ ಬರಬೇಕಾಗುತ್ತದೆ, ಹಾಗೆ ಬಂದಂತವುಗಳಿಗೆ ಮಾತ್ರ ಅವುಗಳಿಗೆ ಬಡ್ಡಿರಹಿತವಾಗಿ ಬೀಜಧನ ಹಾಗೂ ಕೆಪಿಟಿಸಿಎಲ್ನಿಂದ ಘಟಕವು ಮುಚ್ಚಿಹೋದ ಅವಧಿಯಲ್ಲಿ

ಯಾವುದು ನಿಗದಿತ ದರ ಹಾಗೂ ಡಿಮ್ಯಾಂಡ್ ಚಾರ್ಜಸ್ ಅವುಗಳಿಗೆ ಏನಾಯಿತಿಯನ್ನು ಮಾಡಲಾಗಿದೆ. ವಿದ್ಯುತ್‌ಬಿಲ್‌ನ ಪಾವತಿ ಇರುವ ಬಾಕಿಯನ್ನು ಶೇಕಡ ಅರ್ಧದಷ್ಟು ಬಡ್ಡಿಯೊಡನೆ ಅಂದರೆ 3 ವರ್ಷಗಳಲ್ಲಿ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶವಿದೆ. ಮಾರಾಟ ತೆರಿಗೆ ಬಾಕಿಯನ್ನು ಪಾವತಿಸುವಲ್ಲಿ ಶೇಕಡ ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶವಿದೆ. ಕೆಪಿಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ಲೆಕ್ಕ ಹಾಕದಿರುವಂತೆ ಅದನ್ನು ಒಂದು ಅವಕಾಶವನ್ನು ಮಾಡಿಕೊಟ್ಟಿದೆ. ಮುಂದಿನ ಅವಧಿಗೆ ಪಾವತಿ ಮಾಡಬೇಕಾದ ತೆರಿಗೆಗಳನ್ನು ಬಡ್ಡಿ ಇಲ್ಲದೆ ಪಾವತಿಸಲು ಮೂರುವರೆ ವರ್ಷಗಳವರೆಗೆ ಅವಕಾಶವನ್ನು ಮಾಡಿಕೊಡಲಾಗಿದೆ. ಇನ್ನೂ ಹೆಚ್ಚಿನ ಘಟಕಗಳು ತೊಂದರೆಯಲ್ಲಿವೆ ಎಂದು ತಾವು ಏನು ಹೇಳುತ್ತಿದ್ದೀರಿ ನಾವು ಆ ಬಗ್ಗೆ ವರದಿಯನ್ನು ತರಿಸಿಕೊಂಡು ತಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನತಕ್ಕಂತಹ ಮಾತನ್ನು ತಮಗೆ ತಿಳಿಸಬಯಸುತ್ತೇನೆ.

ಶ್ರೀ ಹೆಚ್.ಗೋಪಾಲಭಂಡಾರಿ: ಮಾನ್ಯ ಅಧ್ಯಕ್ಷರೆ, ಟಾಸ್ಕ್‌ಫೋರ್ಸ್ ಘಟಕದವರು ಮುಂದೆ ಬಂದು ನಿರ್ಣಯ ಮಾಡಿದ್ದು ಮಾನ್ಯ ಸಚಿವರು ತಿಳಿಸಿದಷ್ಟು ಇರಬಹುದು. ಆದರೆ ಟಾಸ್ಕ್‌ಫೋರ್ಸ್ ಸಮಿತಿ ಆಗಾಗ್ಗೆ ಸೇರುತ್ತಿಲ್ಲ. ಸಮಿತಿಯ ಮುಂದೆ ಇಂತಹ ಸಾಕಷ್ಟು ಕೈಗಾರಿಕೆಗಳು ಸಮಸ್ಯೆಗಳನ್ನು ಮಂಡಿಸದೆ ಹಾಗೆಯೇ ಉಳಿದುಕೊಂಡು ಹೋಗಿರುತ್ತವೆಂಬುದು ನನ್ನ ಅಭಿಪ್ರಾಯವಾಗಿದೆ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಏನು ಕ್ರಮವನ್ನು ಕೈಗೊಳ್ಳುತ್ತಾರೆಂದು ತಿಳಿಸಬೇಕೆಂದು ಏನಂತಿಸುತ್ತೇನೆ. ಕೆಎಸ್‌ಎಫ್‌ಸಿ ಮತ್ತು ಆರ್ಥಿಕ ಸಂಸ್ಥೆಗಳು ಬೇರೆ ಬೇರೆ ಬ್ಯಾಂಕುಗಳ ಮುಖೇನ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುವ ಬಗ್ಗೆಯೂ ಕೂಡ ಏನಾದರೂ ಒಂದು ಕ್ರಮವನ್ನು ಕೈಗೊಳ್ಳದಿದ್ದರೆ ಕೈಗಾರಿಕೆಗಳನ್ನು ಪುನಶ್ಚೇತನವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವಧಿಯನ್ನು ವಿಸ್ತರಿಸುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕೆಂದು ಏನಂತಿಸುತ್ತೇನೆ.

ಶ್ರೀ ಎಸ್.ಆರ್.ಕಾಶಪ್ಪನವರ್: ಮಾನ್ಯ ಅಧ್ಯಕ್ಷರೆ, ಎರಡು ಅಥವಾ ಎರಡೂವರೆ ವರ್ಷಕ್ಕೆ ಮೇಲ್ಪಟ್ಟ ಅವಧಿಗೆ ಮೂಲ ಸಾಲದ ಬಡ್ಡಿ ಮರುಪಾವತಿ ಮುದ್ದತ್ತನ್ನು ಮೀರಿದ್ದರೆ ಅಂತಹ ರೋಗಗ್ರಸ್ಥ ಕೈಗಾರಿಕೆಗಳಾಗುತ್ತವೆ. ಹಿಂದಿನ ಎರಡು ಲೆಕ್ಕ ವರ್ಷಗಳ ಘಟಕದ ಪರಮಾವಧಿ ಮೌಲ್ಯದಲ್ಲಿ ಶೇಕಡ 50ರಷ್ಟು ಹೆಚ್ಚು ಹಣಕಾಸಿನ ನಷ್ಟದಿಂದಾಗಿ ಘಟಕದ ನಿವ್ವಳ ಮೌಲ್ಯದಲ್ಲಿ ಕೊರತೆ ಉಂಟಾದರೆ ಅಂತಹವುಗಳಿಗೆ ಇಂತಹ ಅವಕಾಶಗಳನ್ನು ನಾವು ಇಟ್ಟಿರುತ್ತೇವೆ. ರಾಜ್ಯದ ರೋಗಗ್ರಸ್ಥ ಕೈಗಾರಿಕೆಗಳನ್ನು ಗುರುತಿಸಿ ಆರ್.ಬಿ.ಐ. ಪರಿಭಾಷೆಯಂತೆ ತಿದ್ದುಪಡಿಯನ್ನು ಮಾಡದೆ

ಅಳವಡಿಸಿಕೊಂಡಿರುತ್ತೇವೆ. ತಾವು ಹೇಳಿದ ಹಾಗೆ ಟಾಸ್ಕ್‌ಫೋರ್ಸ್ ಸಮಿತಿ ಮೇಲಿಂದ ಮೇಲೆ ಸೇರುತ್ತಿಲ್ಲವೆಂದು ಹೇಳಿರುತ್ತೀರಿ, ಸಭೆ ಸೇರುವಂತೆ ಮಾಡಿಸುತ್ತೇನೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತಿದ್ದೇನೆ.

ಶ್ರೀ ಎನ್.ಯೋಗೀಶ್‌ಭಟ್: ಮಾನ್ಯ ಅಧ್ಯಕ್ಷರೆ, ಕೆಎಸ್‌ಎಫ್‌ಸಿಯಿಂದ ಸಾಲ ತೆಗೆದುಕೊಂಡ ಯಾವುದಾದರೂ ಒಂದು ಸಂಸ್ಥೆ ಲಾಸ್ ಆಗಿ ಬೀಗಮುದ್ರೆ ಹಾಕಿದಾಗ ಬಡ್ಡಿಯನ್ನು ಮನ್ನಾ ಮಾಡುವ ಪದ್ಧತಿ ಇದೆ. ಇವತ್ತಿನವರೆವಿಗೂ ಆ ಕೆಲಸವಾಗುತ್ತಿಲ್ಲ. ಇದರ ಬಗ್ಗೆಯೂ ಕೂಡ ವಿಚಾರ ಮಾಡಬೇಕೆಂದು ನಾನು ಹೇಳುತ್ತೇನೆ. 100 ಮತ್ತು 40 ಹೆಚ್‌ಪಿ ಇದರ ಬಗ್ಗೆ ರೇಟ್‌ನಲ್ಲಿ ಸಾಕಷ್ಟು ತಾರತಮ್ಯವಿರುತ್ತದೆ. 100 ಹೆಚ್‌ಪಿಯನ್ನು ಬಳಸಿ ಎಷ್ಟೋ ಜನರಿಗೆ ಉದ್ಯೋಗವನ್ನು ಕೊಡುವಂತಹ ಒಂದು ಕೈಗಾರಿಕೆಗೆ 40 ಹೆಚ್‌ಪಿಯ ಸಣ್ಣ ಕೈಗಾರಿಕೆಗಳಿಗೆ ಕನಿಷ್ಟ ಮಟ್ಟದ ದರದಲ್ಲಿ ಮಾಡಬೇಕೆಂದು ಕೇಳುತ್ತೇನೆ. ಸೇಲ್ಸ್ ಟ್ಯಾಕ್ಸ್‌ನ್ನು ಸಣ್ಣ ಕೈಗಾರಿಕೆಗಳಿಗೆ 2 ಪರ್ಸಂಟ್‌ಗೆ ಮಿನಿಮಮ್ ಮಾಡಿದರೆ ಈ ಘಟಕಗಳು ಉಳಿಯಲಿಕ್ಕೆ ಸಾಧ್ಯವಿದೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಬೇರೆ ಬೇರೆ ರಾಜ್ಯಗಳಲ್ಲಿ ಕಡ್ಡಾಯವಾಗಿ ಸಣ್ಣ ಕೈಗಾರಿಕೆಗಳಿಂದ ಖರೀದಿ ಮಾಡಬೇಕೆಂದು ಇರುತ್ತದೆ. ಸಬ್ಸಿಡಿ ರಿಲೀಸ್ ಆಗುತ್ತಿಲ್ಲ, ಇದನ್ನು ತಕ್ಷಣ ರಿಲೀಸ್ ಮಾಡುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಎಸ್.ಆರ್.ಕಾಶಪ್ಪನವರ್: ಕೆಎಸ್‌ಎಫ್‌ಸಿಯಲ್ಲಿ ಒಂದೇ ಸಲಕ್ಕೆ ಕಂತನ್ನು ಮುಕ್ತಾಯ ಮಾಡಿದರೆ ಅವುಗಳ ವ್ಯವಸ್ಥೆಯನ್ನು ಬಗೆಹರಿಸಲಿಕ್ಕೆ ಮಾಡಿರುತ್ತೇವೆ, ಇದರಲ್ಲಿ ಯಾವ ಯಾವ ಘಟಕಗಳಿಗೆ ಯಾವ ಯಾವ ನಿರ್ಣಯವನ್ನು ತೆಗೆದುಕೊಳ್ಳಬೇಕು ಅದನ್ನು ಎಂ.ಡಿ.ಯವರು ಮಾಡುತ್ತಾರೆ. ಮಾನ್ಯ ಸದಸ್ಯರು ಸೂಚಿಸಿರತಕ್ಕಂತಹ ಕೆಲವು ವಿಷಯಗಳನ್ನು ಕಾನೂನಿನ ಚೌಕಟ್ಟಿನೊಳಗಡೆ ಬರತಕ್ಕಂಥವುಗಳನ್ನು ನಾವು ತಕ್ಷಣ ಕ್ರಮವನ್ನು ಕೈಗೊಳ್ಳತ್ತೇವೆಂಬ ಭರವಸೆಯನ್ನು ಕೊಡುತ್ತೇವೆ.

ರೇಷ್ಮೆ ಉತ್ಪಾದನೆ ಮತ್ತು ಬೇಡಿಕೆ.

215(2076)

ರಾಜುಗೌಡ ಬಿ.(ಹನೂರು): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2001-2002ನೇ ಸಾಲಿನಲ್ಲಿ ಎಷ್ಟು ರೇಷ್ಮೆ ಉತ್ಪಾದನೆಯಾಗಿದೆ;